**ಎಸ್ ಸಿ ನಂ. 5022/2025**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿ ಡಬ್ಲೂಃ** 6

**ಪಿ ಡಬ್ಲೂಃ** 5

| | |
|---|---|
| ಸಾಕ್ಷಿಯ ಹೆಸರು - | ಶಬ್ಬೀರ |
| ತಂದೆಯ ಹೆಸರು - | ಹುಸ್ಮಾನ್ |
| ವಯಸ್ಸು - | 34 ವರ್ಷ |
| ಉದ್ಯೋಗ - | ಖಾಸಗಿ ಕೆಲಸ |
| ವಾಸಸ್ಥಳ - | ಕಮಲಾಪುರ |

**ಸಾಕ್ಷಿಯನ್ನು ದಿನಾಂಕಃ 03-03-2026 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಪಿ. ಪಿ. ಅವರಿಂದ**

ಈಗ ತೋರಿಸಿದ ಮಹಜರಿನಲ್ಲಿರುವ ಸಹಿ ನನ್ನದು. ಅದನ್ನು ನಿಪಿಃ 15 ಎಂದು, ಸಹಿಯನ್ನು ನಿಪಿಃ 15 (ಎ) ಎಂದು ಗುರುತಿಸಲಾಯಿತು. ದಿಃ 25-10-2024 ರಂದು ಪೋಲಿಸರು ನನ್ನನ್ನು ಕೊಲೆ ಪ್ರಕರಣದಲ್ಲಿ ಠಾಣೆಗೆ ಕರೆಯಿಸಿ ಪಂಚರಾಗುವಂತೆ ಕೇಳಿಕೊಂಡಿದ್ದು, ನಾನು ಠಾಣೆಗೆ ಹೋಗಿದ್ದೆ. ಅಲ್ಲಿ ಆರೋಪಿ ಇದ್ದ. ಒಂದು ಬಾಲಕನನ್ನು ಕೆನಾಲ್ ಗೆ ತಳ್ಳಿ ಸಾಯಿಸಿದ ಜಾಗ ತೋರಿಸಿಕೊಡುವುದಾಗಿ ಹೇಳಿ ಪಿ ಕೆ ಹಳ್ಳಿ ರಸ್ತೆಯ ಕನ್ನಡ ವಿಶ್ವವಿದ್ಯಾಲಯದ ಸಮೀಪ ಕರೆದುಕೊಂಡು ಹೋಗಿ ಜಾಗ ತೋರಿಸಿಕೊಟ್ಟ ಮೇರೆಗೆ ಪೋಲಿಸರು ಮಹಜರು ಜರುಗಿಸಿ, ನನ್ನ ಸಹಿ ಪಡೆದಿದ್ದರು. ಸ್ಥಳದಲ್ಲಿ ನಿಪಿಃ 16 ಮತ್ತು 17 ಪೋಟೋ ಕೂಡಾ ತೆಗೆದಿದ್ದರು. ಅದರಲ್ಲಿ ನಾನು, ಚಾಸಾ -7 ಹಾಗೂ ಆರೋಪಿ ಕೂಡಾ ಇದ್ದೇವೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ವಾಯ್ ., ವಕೀಲರಿಂದಃ**

ನನಗೆ ಪೋಲಿಸರು ಲಿಖಿತ ನೋಟಿಸ್ ಕೊಟ್ಟಿರಲಿಲ್ಲ. ನಾನು ಹೇಳಿದಂತೆ ಯಾವುದೇ ಸ್ಥಳಕ್ಕೆ ಹೋಗಿಲ್ಲ. ಪಂಚನಾಮೆಯಲ್ಲಿ ಭಾಗಿಯಾಗಿಲ್ಲ. ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿಃ 15 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ.

ನಾನು ಠಾಣೆಯಲ್ಲಿ ಸಹಿ ಮಾಡಿದ್ದೇನೆ ಅಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಪೋಟೋ ತೆಗೆದಿಲ್ಲ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ವಿಜಯನಗರ ಜಿಲ್ಲೆ, ಹೊಸಪೇಟೆ.